# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ<br>Part – IVA | ಬೆಂಗಳೂರು, ಶನಿವಾರ, ೧೮, ಸೆಪ್ಟೆಂಬರ್, ೨೦೨೧ (ಭಾದ್ರಪದ, ೨೭, ಶಕವರ್ಷ, ೧೯೪೩)<br>BENGALURU, SATURDAY, 18, SEPTEMBER, 2021 (BHADRAPADA , 27, SHAKAVARSHA, 1943) | ನಂ. ೭೮೨<br>No. 782 |
|---|---|---|


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ
## ಅಧಿಸೂಚನೆ
## ಸಂಖ್ಯೆ: ಸಂವ್ಯಶಾಇ 37 ಶಾಸನ 2021

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2021 ಇದಕ್ಕೆ 2021ರ ಸೆಪ್ಟೆಂಬರ್ ತಿಂಗಳ 18ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 25 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

### 2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 25

(2021 ರ ಸೆಪ್ಟೆಂಬರ್ ತಿಂಗಳ 18ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

### ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2021

(2021ರ ಸೆಪ್ಟೆಂಬರ್ ತಿಂಗಳ 18ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮೋದನೆಯನ್ನು ಪಡೆಯಲಾಗಿದೆ)

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ**.- (1) ಈ ಅಧಿನಿಯಮವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 5ನೇ ಪ್ರಕರಣದ ತಿದ್ದುಪಡಿ**.- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ 14) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 5ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳ ಬದಲಾಗಿ "ಸರ್ಕಾರವು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು;

(ii) (2)ನೇ ಉಪಪ್ರಕರಣದಲ್ಲಿ "ರಾಜ್ಯ ಚುನಾವಣಾ ಆಯೋಗದ" ಎಂಬ ಪದಗಳ ಬದಲಾಗಿ "ಸರ್ಕಾರದ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು;

(iii) (3)ನೇ ಉಪಪ್ರಕರಣದಲ್ಲಿ "ರಾಜ್ಯ ಚುನಾವಣಾ ಆಯೋಗದ" ಎಂಬ ಪದಗಳ ಬದಲಾಗಿ "ಸರ್ಕಾರದ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು;

(iv) (4)ನೇ ಉಪಪ್ರಕರಣದಲ್ಲಿ "ರಾಜ್ಯ ಚುನಾವಣಾ ಆಯೋಗದ" ಎಂಬ ಪದಗಳ ಬದಲಾಗಿ "ಸರ್ಕಾರದ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(v) (5)ನೇ ಉಪಪ್ರಕರಣದಲ್ಲಿ "ರಾಜ್ಯ ಚುನಾವಣಾ ಆಯೋಗದ" ಎಂಬ ಪದಗಳ ಬದಲಾಗಿ "ಸರ್ಕಾರದ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**3. 121ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 121ನೇ ಪ್ರಕರಣದಲ್ಲಿ "ರಾಜ್ಯ ಚುನಾವಣಾ ಆಯೋಗದಿಂದ" ಎಂಬ ಪದಗಳ ಬದಲಾಗಿ "ಸರ್ಕಾರದಿಂದ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**4. 122ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 122ನೇ ಪ್ರಕರಣದಲ್ಲಿ "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳ ಬದಲಾಗಿ "ಸರ್ಕಾರವು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**5. 123ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 123ನೇ ಪ್ರಕರಣದಲ್ಲಿ "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳು ಬರುವ ಕಡೆಗಳಲ್ಲೆಲ್ಲ "ಸರ್ಕಾರವು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**6. 124ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 124ನೇ ಪ್ರಕರಣದಲ್ಲಿ,-

(i) "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳ ಬದಲಾಗಿ "ಸರ್ಕಾರವು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(ii) (ಸಿ) ಖಂಡದಲ್ಲಿ "ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಸ್ಥಾನಗಳನ್ನು ಮೀಸಲಿರಿಸಿರುವಂಥ ಪ್ರಾದೇಶಿಕ ಚುನಾವಣಾ ಕ್ಷೇತ್ರವನ್ನು ಅಥವಾ ಚುನಾವಣಾ ಕ್ಷೇತ್ರಗಳನ್ನು ನಿರ್ಧರಿಸತಕ್ಕದ್ದು" ಎಂಬ ಪದಗಳ ಬದಲಾಗಿ "ಪ್ರಾದೇಶಿಕ ಚುನಾವಣಾ ಕ್ಷೇತ್ರವನ್ನು ನಿರ್ಧರಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**7. 161ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 161ನೇ ಪ್ರಕರಣದಲ್ಲಿ "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳ ಬದಲಾಗಿ "ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ಸರ್ಕಾರವು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**8. 162ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 162ನೇ ಪ್ರಕರಣದಲ್ಲಿ "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳು ಬರುವ ಕಡೆಗಳಲ್ಲೆಲ್ಲ "ಸರ್ಕಾರವು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**9. 163ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 163ನೇ ಪ್ರಕರಣದಲ್ಲಿ,-

(i) "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳ ಬದಲಾಗಿ "ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಶಿಫಾರಸ್ಸಿನ ಮೇಲೆ ಸರ್ಕಾರವು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ಸಿ) ಖಂಡದಲ್ಲಿ "ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮತ್ತು ಮಹಿಳೆಯರಿಗಾಗಿ ಸ್ಥಾನಗಳನ್ನು ಮೀಸಲಿರಿಸಿದಂಥ ಪ್ರಾದೇಶಿಕ ಚುನಾವಣಾ ಕ್ಷೇತ್ರವನ್ನು ಅಥವಾ ಚುನಾವಣಾ ಕ್ಷೇತ್ರಗಳನ್ನು ನಿರ್ಧರಿಸತಕ್ಕದ್ದು" ಎಂಬ ಪದಗಳ ಬದಲಾಗಿ "ಪ್ರಾದೇಶಿಕ ಚುನಾವಣಾ ಕ್ಷೇತ್ರವನ್ನು ನಿರ್ಧರಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**10. 308ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 308ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ "ಕ್ಷೇತ್ರಗಳ ಸೀಮಾ ನಿರ್ಣಯದ ಮತ್ತು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**11. 308-ಇ ಯಿಂದ 308-ಎಂ ವರೆಗೆ ಹೊಸ ಪ್ರಕರಣಗಳ ಸೇರ್ಪಡೆ.**- ಮೂಲ ಅಧಿನಿಯಮದ 308ಡಿ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣಗಳನ್ನು ಸೇರಿಸತಕ್ಕದ್ದು, ಎಂದರೆ:-

**"308-ಇ. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ರಚನೆ.**- (1) ರಾಜ್ಯ ಸರ್ಕಾರವು ಈ ಮುಂದಿನ ಸದಸ್ಯರುಗಳನ್ನೊಳಗೊಂಡ "**ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ**" ಎಂಬ ಹೆಸರಿನಿಂದ ಕರೆಯಲಾಗುವ ಒಂದು ಆಯೋಗವನ್ನು ರಚಿಸತಕ್ಕದ್ದು, ಎಂದರೆ:

| | |
|---|---|
| ಸರ್ಕಾರವು ನೇಮಿಸುವ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಅಥವಾ ಅಪರ ಮುಖ್ಯ ಕಾರ್ಯದರ್ಶಿ | ಅಧ್ಯಕ್ಷ. |
| ಸರ್ಕಾರವು ನೇಮಿಸುವ ಗ್ರಾಮೀಣಾಭಿವೃದ್ಧಿ, ವಿಕೇಂದ್ರೀಕರಣ ಮತ್ತು ಪಂಚಾಯತ್ ರಾಜ್ ವಿಷಯಗಳಲ್ಲಿ ಅನುಭವ ಹೊಂದಿರುವ ಸರ್ಕಾರದ ನಿವೃತ್ತ ಕಾರ್ಯದರ್ಶಿ ಅಥವಾ ಸರ್ಕಾರದ ಕಾರ್ಯದರ್ಶಿ ದರ್ಜೆಗೆ ತತ್ಸಮಾನವಾದ ದರ್ಜೆಯ ನಿವೃತ್ತ ಅಧಿಕಾರಿ. | ಸದಸ್ಯ |
| ಸರ್ಕಾರವು ನಾಮ ನಿರ್ದೇಶಿಸುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಲಯದಲ್ಲಿನ ಒಬ್ಬ ತಜ್ಞ | ಸದಸ್ಯ |
| ಪಂಚಾಯತ್ ರಾಜ್ ಇಲಾಖೆಯ ಆಯುಕ್ತರು | ಪದನಿಮಿತ್ತ ಸದಸ್ಯ |
| ನಿರ್ದೇಶಕರು, ಪಂಚಾಯತ್ ರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ವಿಷಯದಲ್ಲಿ ವ್ಯವಹರಿಸುತ್ತಿರುವ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ. | ಪದನಿಮಿತ್ತ ಸದಸ್ಯ ಕಾರ್ಯದರ್ಶಿ |

(2) ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಕೇಂದ್ರ ಕಛೇರಿಯು ಬೆಂಗಳೂರಿನಲ್ಲಿ ಇರತಕ್ಕದ್ದು.

**308-ಎಫ್. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಪ್ರಕಾರ್ಯಗಳು.**- ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:

(i) ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಸಂಬಂಧಿತ ಅಂಕಿಅಂಶಗಳ ಹಿಂದಿನ ಜನಗಣತಿಯಲ್ಲಿ ಖಚಿತಪಡಿಸಿದ ಜನಸಂಖ್ಯೆಯ ಆಧಾರದ ಮೇಲೆ ಪ್ರತಿಯೊಂದು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗೆ ಚುನಾಯಿಸಬೇಕಾದ ಒಟ್ಟು ಸದಸ್ಯರ ಸಂಖ್ಯೆಯನ್ನು ನಿಗದಿಪಡಿಸುವುದಕ್ಕಾಗಿ ಶಿಫಾರಸ್ಸುಗಳನ್ನು ಮಾಡುವುದು;

(ii) ಹಿಂದಿನ ಜನಗಣತಿಯಲ್ಲಿ ಪ್ರಕಟಿಸಲಾದ ಸಂಬಂಧಿತ ಜನಗಣತಿ ಅಂಕಿಅಂಶಗಳ ಆಧಾರದ ಮೇಲೆ ಪ್ರತಿಯೊಂದು ಗ್ರಾಮ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ ಪ್ರದೇಶವನ್ನು ಆಯಾ ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಗೆ ಚುನಾಯಿಸಲು ಅಗತ್ಯವಾದ ಸದಸ್ಯರ ಸಂಖ್ಯೆಯನ್ನು ವಾರ್ಡುಗಳು ಅಥವಾ ಕ್ಷೇತ್ರಗಳನ್ನಾಗಿ ವಿಂಗಡಿಸಲು ಶಿಫಾರಸ್ಸುಗಳನ್ನು ಮಾಡುವುದು;

(iii) ಪ್ರತಿಯೊಂದು ಗ್ರಾಮ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ವಾರ್ಡುಗಳು ಅಥವಾ ಕ್ಷೇತ್ರಗಳ ಗಡಿಗಳನ್ನು ನಿರ್ಧರಿಸುವುದಕ್ಕಾಗಿ ಶಿಫಾರಸ್ಸುಗಳನ್ನು ಮಾಡುವುದು;

(iv) ಪ್ರತಿಯೊಂದು ಗ್ರಾಮ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯಲ್ಲಿನ ಪ್ರತಿ ವಾರ್ಡು ಅಥವಾ ಕ್ಷೇತ್ರಗಳ ಜನಸಂಖ್ಯೆಯು, ಕಾರ್ಯಸಾಧುವಾಗಷ್ಟರ ಮಟ್ಟಿಗೆ ಸಮನಾಗಿರತಕ್ಕದ್ದೆಂದು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಶಿಫಾರಸ್ಸುಗಳನ್ನು ಮಾಡುವುದು;

(v) ಪ್ರತಿಯೊಂದು ಪ್ರಾದೇಶಿಕ ವಾರ್ಡುಗಳು ಅಥವಾ ಚುನಾವಣಾ ಕ್ಷೇತ್ರಗಳು ಕಾರ್ಯಸಾಧುವಾಗುಷ್ಟರ ಮಟ್ಟಿಗೆ ಭೌಗೋಳಿಕವಾಗಿ ನಿಬಿಡತೆಯ ಪ್ರದೇಶವನ್ನು ಹೊಂದಲು ಶಿಫಾರಸ್ಸುಗಳನ್ನು ಮಾಡುವುದು; ಮತ್ತು

(vi) ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು:

ಪರಂತು ಈ ಪ್ರಕರಣದ ಅಡಿಯಲ್ಲಿ ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಮಾಡುವ ಮೊದಲು ಆಯೋಗವು ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸತಕ್ಕದ್ದು ಮತ್ತು ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡತಕ್ಕದ್ದು.

**308-ಜಿ. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಅಧಿಕಾರಗಳು**:- (1) ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಅದರ ಸ್ವಂತ ಕಾರ್ಯ ವಿಧಾನವನ್ನು ನಿರ್ಧರಿಸತಕ್ಕದ್ದು ಮತ್ತು ಅದರ ಪ್ರಕಾರ್ಯಗಳ ನೆರವೇರಿಕೆಯಲ್ಲಿ ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ, ದಾವೆಯ ವಿಚಾರಣೆಯನ್ನು ನಡೆಸುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ (1908 ರ ಕೇಂದ್ರ ಅಧಿನಿಯಮ V) ಅಡಿಯಲ್ಲಿ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(i) ಸಾಕ್ಷಿಗಳಿಗೆ ಸಮನ್ಸ್ ಮಾಡುವುದು ಮತ್ತು ಹಾಜರಾತಿಯನ್ನು ಜಾರಿ ಮಾಡುವುದು.

(ii) ಯಾವುದೇ ದಸ್ತಾವೇಜನ್ನು ಹಾಜರುಪಡಿಸಲು ಅಗತ್ಯಪಡಿಸುವುದು, ಮತ್ತು

(iii) ಯಾವುದೇ ಕಛೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಆಜ್ಞಾಪಿಸುವುದು.

(2) ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು, ತನ್ನ ಪರ್ಯಾಲೋಚನೆಯಲ್ಲಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಉಪಯುಕ್ತವಾಗಬಹುದೆಂದು ಅಥವಾ ಸಂಬಂಧಪಡಬಹುದೆಂದು ಅಭಿಪ್ರಾಯಪಡುವಂಥ ಅಂಶಗಳು ಅಥವಾ ವಿಷಯಗಳ ಕುರಿತ ಯಾವುದೇ ಮಾಹಿತಿಯನ್ನು ಒದಗಿಸುವಂತೆ ಯಾರೇ ವ್ಯಕ್ತಿಯನ್ನು ಅಗತ್ಯಪಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(3) ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು, (1)ನೇ ಉಪ ಪ್ರಕರಣದ (i) (ii) ಮತ್ತು (iii) ಖಂಡಗಳ ಹಾಗೂ (2)ನೇ ಉಪ ಪ್ರಕರಣದ ಮೂಲಕ ತನಗೆ ಪ್ರದತ್ತವಾದ ಯಾವುವೇ ಅಧಿಕಾರಗಳನ್ನು ಚಲಾಯಿಸಲು ತನ್ನ ಯಾರೇ ಸದಸ್ಯರನ್ನು ಅಧಿಕೃತಗೊಳಿಸಬಹುದು ಮತ್ತು ಆ ಕುರಿತು ಸೀಮಾ ನಿರ್ಣಯ ಆಯೋಗವು ಅಧಿಕೃತಗೊಳಿಸಿದ ಸದಸ್ಯನು ಯಾವುದೇ ಅಧಿಕಾರಗಳನ್ನು ಚಲಾಯಿಸುವಲ್ಲಿ ಮಾಡಿದ ಯಾವುದೇ ಆದೇಶ ಅಥವಾ ಕೈಗೊಂಡ ಕಾರ್ಯವು ಸಂದರ್ಭಾನುಸಾರವಾಗಿ ಸೀಮಾ ನಿರ್ಣಯ ಆಯೋಗದ ಆದೇಶ ಅಥವಾ ಕಾರ್ಯವೆಂದು ಭಾವಿಸತಕ್ಕದ್ದು.

**308-ಹೆಚ್. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಸಭೆ.**- ಸೀಮಾ ನಿರ್ಣಯ ಆಯೋಗವು ಅಗತ್ಯವಿರುವಾಗಲೆಲ್ಲಾ, ಈ ಅಧಿನಿಯಮದಲ್ಲಿ ಉಪಬಂಧಿಸಬಹುದಾದಂಥ ಸಮಯ ಮತ್ತು ಸ್ಥಳದಲ್ಲಿ ಹಾಗೂ ಅಂಥ ಕಾರ್ಯವಿಧಾನದ ನಿಯಮಗಳನ್ನು ಪಾಲಿಸಲು ಸಭೆ ಸೇರತಕ್ಕದ್ದು.

**308-ಐ.ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಉದ್ಯೋಗಿಗಳು**:- ಸರ್ಕಾರವು, ಅದರ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ಅವಶ್ಯಕವೆಂದು ಭಾವಿಸಬಹುದಾದಂಥ ಸಂಖ್ಯೆಯ ಉದ್ಯೋಗಿಗಳನ್ನು ನೇಮಿಸತಕ್ಕದ್ದು ಅಥವಾ ಪ್ರತಿ ನಿಯೋಜಿಸತಕ್ಕದ್ದು.

**308-ಜೆ.**ನಿರ್ದೇಶನಗಳನ್ನು ನೀಡುವ ಅಧಿಕಾರ:- ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ತನ್ನ ಅಭಿಪ್ರಾಯದಲ್ಲಿ ಅವಶ್ಯಕ ಅಥವಾ ವಿಹಿತವಾಗಿದೆ ಎಂದು ಭಾವಿಸುವ ಅಂಥ ನಿರ್ದೇಶನಗಳನ್ನು ಸೀಮಾ ನಿರ್ಣಯ ಆಯೋಗಕ್ಕೆ ನೀಡಬಹುದು ಹಾಗೂ ಸೀಮಾ ನಿರ್ಣಯ ಆಯೋಗವು ಎಲ್ಲಾ ಅಂಥ ನಿರ್ದೇಶನಗಳನ್ನು ಜಾರಿಗೊಳಿಸತಕ್ಕದ್ದು.

**308-ಕೆ. ಸೀಮಾ ನಿರ್ಣಯ ಆಯೋಗದ ವ್ಯವಹಾರಗಳು ಖಾಲಿ ಸ್ಥಾನಗಳ ಅಥವಾ ಗೈರುಹಾಜರಿಯ ಕಾರಣದಿಂದಾಗಿ ಅಸಿಂಧುಗೊಳ್ಳತಕ್ಕದ್ದಲ್ಲ.**- ಸೀಮಾ ನಿರ್ಣಯ ಆಯೋಗದಲ್ಲಿ ಸದಸ್ಯರ ತಾತ್ಕಾಲಿಕ ಗೈರು ಹಾಜರಿ ಅಥವಾ ಖಾಲಿ ಸ್ಥಾನವಿದ್ದಾಗ್ಯೂ ಆಯೋಗವು ಕಾರ್ಯನಿರ್ವಹಿಸಲು ಅಧಿಕಾರವನ್ನು ಹೊಂದಿರತಕ್ಕದ್ದು ಹಾಗೂ ಅಂಥ ತಾತ್ಕಾಲಿಕ ಗೈರು ಹಾಜರಿ ಅಥವಾ ಅಂಥ ಖಾಲಿ ಸ್ಥಾನದ ಇರುವಿಕೆಯ ಕಾರಣದಿಂದ ಮಾತ್ರವೇ ಸೀಮಾ ನಿರ್ಣಯ ಆಯೋಗದ ಯಾವುದೇ ಕಾರ್ಯ ಅಥವಾ ವ್ಯವಹರಣೆಯ ಅಸಿಂಧುವಾಗತಕ್ಕದ್ದಲ್ಲ ಅಥವಾ ಪ್ರಶ್ನಾರ್ಹವಾಗತಕ್ಕದ್ದಲ್ಲ.

**308-ಎಲ್. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.**- ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ವಿನಿಯಮಗಳು, ಮಾಡಿದ ಆದೇಶಗಳು ಅಥವಾ ನೀಡಿದ ನಿರ್ದೇಶನಗಳಿಗನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ಸರ್ಕಾರ, ಸೀಮಾ ನಿರ್ಣಯ ಆಯೋಗ ಅಥವಾ ಅದರ ಯಾರೇ ಸದಸ್ಯರು ಅಥವಾ ಸರ್ಕಾರದ ಅಥವಾ ಸೀಮಾ ನಿರ್ಣಯ ಆಯೋಗದ ನಿರ್ದೇಶನದ ಅಡಿಯಲ್ಲಿ ಕಾರ್ಯನಿರ್ವಹಿಸುವ ಯಾರೇ ನೌಕರ ಅಥವಾ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**308-ಎಂ.ತೊಂದರೆಗಳನ್ನು ನಿವಾರಿಸುವ ಅಧಿಕಾರ.**- ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು ಈ ಅಧಿನಿಯಮದ ಉಪಬಂಧಗಳಿಗೆ ಅಸಗಂತವಾಗದ ಸಂದರ್ಭೋಚಿತವಾದ ಆದೇಶದ ಮೂಲಕ ತೊಂದರೆಗಳನ್ನು ನಿವಾರಿಸುವ ಉದ್ದೇಶಕ್ಕಾಗಿ ಅಗತ್ಯ ಅಥವಾ ವಿಹಿತವೆಂದು ಕಂಡುಬರುವ ಯಾವುದೇ ಕಾರ್ಯವನ್ನು ಮಾಡಬಹುದು."

**12. ತಾತ್ಕಾಲಿಕ ಉಪಬಂಧಗಳು.**- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದಂದು ಮತ್ತು ದಿನಾಂಕದಿಂದ,-

(i) ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಎಲ್ಲಾ ಸೀಮಾ ನಿರ್ಣಯ, ಅಧಿಸೂಚನೆಗಳು ಈ ಕೂಡಲೇ ರದ್ದುಗೊಳ್ಳತಕ್ಕದ್ದು;

(ii) ಪ್ರಸ್ತುತವಿರುವ ಕ್ಷೇತ್ರಗಳ ಸೀಮಾ ನಿರ್ಣಯವನ್ನಾಧರಿಸಿ ಜಾರಿಯಲ್ಲಿರುವ ತಾಲ್ಲೂಕು ಪಂಚಾಯಿತಿಗಳ ಮತ್ತು ಜಿಲ್ಲಾ ಪಂಚಾಯಿತಿಗಳ ಕ್ಷೇತ್ರಗಳನ್ನು ಮೀಸಲಿರಿಸುವ, ಎಲ್ಲಾ ಅಧಿಸೂಚನೆಗಳು ಸಹ ಈ ಕೂಡಲೇ ರದ್ದುಗೊಳ್ಳತಕ್ಕದ್ದು; ಮತ್ತು

(iii) ರಾಜ್ಯ ಸರ್ಕಾರವು, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವನ್ನು ರಚಿಸಲು ಕೂಡಲೇ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

**PARLIAMENTARY AFFAIRS AND LEGISLATION SECRETARIAT**
**NOTIFICATION**
**NO: DPAL 37 SHASANA 2021, BENGALURU, DATED: 18.09.2021**

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2021 (2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 25)ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**KARNATAKA ACT NO. 25 OF 2021**

**(First Published in the Karnataka Gazette Extra-ordinary on the Eighteenth day of September 2021)**

**THE KARNATAKAGRAM SWARAJ AND PANCHAYAT RAJ (AMENDMENT) ACT, 2021**

**(Received the assent of the Governor on the Eighteenth day of September 2021)**

An Act further to amend the Karnataka Gram Swaraj and Panchayat Raj Act, 1993.

Whereas, it is expedient further to amend the Karnataka Gram Swaraj and Panchayat Raj Act, 1993 (Karnataka Act 14 of 1993) for the purposes hereinafter appearing;

Be it enacted by the Karnataka State Legislature in the seventy second year of the Republic of India, as follows:-

**1. Short title and commencement.**-(1) This Act may be called the Karnataka Gram Swaraj and Panchayat Raj (Amendment) Act, 2021.

(2) It shall come into force at once.

**2. Amendment of section 5.**- In section 5 of the Karnataka Gram Swaraj and Panchayat Raj Act, 1993 (Karnataka Act 14 of 1993) (hereinafter referred to as the Principal Act),-

(i) in sub-section (1), for the words "State Election Commission" the word "Government" shall be substituted;

(ii) in sub-section (2), for the words "State Election Commission" the word "Government" shall be substituted;

(iii) in sub-section (3), for the words "State Election Commission" the word "Government" shall be substituted;

(iv) in sub-section (4), for the words "State Election Commission" the word "Government" shall be substituted; and

(v) in sub-section (5), for the words "State Election Commission" the word "Government" shall be substituted.

**3. Amendment of section 121.**- In section 121 of the Principal Act, for the words "State Election Commission" the word "Government" shall be substituted.

**4. Amendment of section 122.**- In section 122 of the Principal Act, for the words "State Election Commission" the word "Government" shall be substituted.

**5. Amendment of section 123.**- In section 123 of the Principal Act, for the words "State Election Commission" wherever they occur, the word "Government" shall be substituted.

**6. Amendment of section 124.**- In section 124 of the Principal Act,-

(i) for the words "State Election Commission" the word "Government" shall be substituted; and

(ii) in clause (c), the words "or constituencies in which seats are reserved for the Scheduled Castes, Scheduled Tribes, Backward Classes and Women" shall be omitted.

**7. Amendment of section 161.**- In section 161 of the Principal Act, for the words "State Election Commission" the words "Government based on the recommendation of the Karnataka Panchayat Raj Delimitation Commission " shall be substituted.

**8. Amendment of section 162.**- In section 162 of the Principal Act, for the words "State Election Commission" wherever they occur, the word "Government" shall be substituted.

**9. Amendment of section 163.**- In section 163 of the Principal Act,-

(i) for the words "State Election Commission" the words "Government on the recommendation of the Karnataka Panchayat Raj Delimitation Commission" shall be substituted; and

(ii) in clause (c), the words "or constituencies in which seats are reserved for the Scheduled Castes, Scheduled Tribes, Backward Classes and Women" shall be omitted.

**10. Amendment of section 308.-** In section 308 of the Principal Act, in sub section (1), the words "delimitation of territorial constituencies and" shall be omitted.

**11. Insertion of new sections 308-E to 308-M.-** After section 308-D of the Principal Act, the following sections shall be inserted, namely:-

"**308-E. Constitution of the Karnataka Panchayat Raj Delimitation Commission.-**(1) The State Government shall constitute a Commission called the Karnataka Panchayat Raj Delimitation Commission consisting of the following members, namely:-

| | |
|---|---|
| Retired Chief Secretary or Additional Chief Secretary to be appointed by the Government | Chairman |
| Retired Secretary to Government or a retired officer equivalent in the rank of Secretary to Government with experience in Rural Development, Decentralization and Panchayat Raj issues to be appointed by the Government . | Member |
| One expert in Rural Development and Panchayat Raj sector to be nominated by the Government. | Member |
| Commissioner of Panchayat Raj Department. | Ex-Officio Member |
| Director, Panchayat Raj, and ex-officio Joint Secretary to Government, dealing with Taluk Panchayat and Zilla Panchayat in Rural Development and Panchayat Raj Department. | Ex-Officio Member Secretary |

(2) The headquarters of the Karnataka Panchayat Raj Delimitation Commission shall be at Bengaluru.

**308-F. Functions of the Karnataka Panchayat Raj Delimitation Commission.-** The Karnataka Panchayat Raj Delimitation Commission shall perform the following functions, namely:-

(i) to make recommendations for fixing the total number of members to be elected to every Grama Panchayat, Taluk Panchayat and Zilla Panchayat on the basis of population as ascertained at the last preceding census of which the relevant figures have been published in the Official Gazette;

(ii) to make recommendations for dividing the area of every Grama Panchayat or Taluk Panchayat or Zilla Panchayat into as many wards or constituencies as the number of members required to be elected to that Grama Panchayat or Taluk

Panchayat or Zilla Panchayat on the basis of the relevant census figures at the last preceding census that have been published;

(iii) to make recommendations for determining the boundaries of the Wards or Constituencies of every Grama Panchayat or Taluk Panchayat or Zilla panchayat;

(iv) to make recommendations with a view to ensuring that the population of each ward or constituencies in every Grama Panchayat or Taluk Panchayat or Zilla panchayat shall, as far as practicable, be the same throughout that Grama Panchayat or Taluk Panchayat or Zilla Panchayat;

(v) to make recommendations to have every territorial wards or constituencies , as far as practicable, be geographically compact area; and

(vi) to perform such other functions as the Government may specify from time to time:

Provided that, the Commission before making recommendations to the Government shall invite objections and give an opportunity of being heard to the public under this section.

**308-G Powers of the Karnataka Panchayat Raj Delimitation Commission.-** (1) The Karnataka Panchayat Raj Delimitation Commission shall determine its own procedure and shall, in the Performance of its functions, have all the powers of a Civil Court under the Code of Civil Procedure, 1908, (Central Act V of 1908) while trying a suit, in respect of the following matters, namely:-

(i) summoning and enforcing the attendance of witnesses;

(ii) requiring the production of any document; and

(iii) requisitioning any public record from any Office.

(2) The Karnataka Panchayat Raj Delimitation Commission shall have power to require any person to furnish any information on such points or matters as in the opinion of the Commission may be useful for, or relevant to, any matter under the consideration of the Commission.

(3) The Karnataka Panchayat Raj Delimitation Commission may authorize any of its members to exercise any of the powers conferred on it by clauses (i), (ii) and (iii) of sub-section (1) and sub-section (2), and any order made or act done in exercise of any of those powers by the member authorized by the Delimitation commission in that behalf shall be deemed order of the Commission or the Act, as the case may be, of the Delimitation Commission.

**308-H. Meeting of the Karnataka Panchayat Raj Delimitation Commission.-** The Delimitation Commission shall meet, as often as may be necessary, at such time and place and observe such rules of procedure as may be provided in the Act.

**308-I. Employees of the Karnataka Panchayat Raj Delimitation Commission.-** The Government shall appoint or depute such number of employees as may be necessary for the efficient performance of its functions.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**308-J. Power to issue Directions.-** The Government may issue to the Delimitation Commission such directions as in its opinion are necessary or expedient for carrying out the purposes of this Act and the Delimitation Commission shall give effect to all such directions.

**308-K. Proceedings of the Delimitation Commission not to be invalidated by vacancies or absence.-** The Delimitation Commission shall have power to act notwithstanding the temporary absence of a member or the existence of a vacancy in the Commission and no act or proceeding of the Delimitation commission shall be invalid or called in question on the ground merely of such temporary absence or of the existence of such vacancy.

**308-L. Protection of action of taken in good faith.-** No suit or other legal proceeding shall lie against the Government, the Delimitation Commission or any member thereof or any employee or person acting under the direction of the Government or the Delimitation Commission, in respect of anything which is in good faith done or intended to be done in pursuance of this Act or regulations, orders or directions made or issued under this Act.

**308-M. Power to remove difficulties.-**If any difficulty arises in giving effect to the provisions of this Act, the Government may, as occasion requires, by order, not inconsistent with the provisions of this Act, do anything which appears to be necessary or expedient for the purpose of removing the difficulty."

**12. Transitory Provisions.-** On and from the date of commencement of the Karnataka Gram Swaraj and Panchayat Raj (Amendment) Act, 2021,-

(i) All delimitation notifications of constituencies of Taluk Panchayats and Zilla Panchayats, in force, shall stand lapsed;

(ii) All notifications reserving the constituencies of Taluk Panchayats and Zilla Panchayats, in force, based on existing delimitation of constituencies shall also stand lapsed; and

(iii) The State Government shall immediately take steps to constitute the Karnataka Panchayat Raj Delimitation Commission.

The above translation of **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2021 (2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 25)** be published in the official Gazette under clause (3) of Article 348 of the Constitution of India.

**THAAWARCHAND GEHLOT**
**GOVERNOR OF KARNATAKA**

By Order and in the name of
the Governor of Karnataka,

**G. SRIDHAR**
Secretary to Government
Department of Parliamentary Affairs
and Legislation

ಮುದ್ರಕರು ಹಾಗೂ ಪ್ರಕಾಶಕರು- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE